# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 18/03/2022 ರಂದು ವಾರ್ಡ್-48ರ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು :-**

1. ಶ್ರೀ. ಬಿ.ಜಿ. ದೇವರಾಜ್, ನೋಡಲ್ ಅಧಿಕಾರಿ.
2. ಶ್ರೀ. ಬಸವರಾಜು, ವಾರ್ಡ್ ಇಂಜಿನೀಯರ್.
3. ಶ್ರೀ. ವೆಂಕಟೇಶ್, ಹಿರಿಯ ಆರೋಗ್ಯ ಪರೀವಿಕ್ಷಕರು.
4. ಶ್ರೀ. ಮುರಳಿ ಕಂದಾಯ ಪರೀವಿಕ್ಷಕರು
5. ಶ್ರೀ. ಅಕ್ರಂ ನವಾಜ್ ಕಾಮಗಾರಿ ಪರೀವಿಕ್ಷಕರು ಬಿ.ಡಬ್ಲೂ.ಎಸ್.ಎಸ್.ಬಿ.
6. ಶ್ರೀಮತಿ. ಫಮಿದಾ ಬೇಗಂ ಟೈಲರಿಂಗ್ ಶಿಕ್ಷಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್ ಸಮಿತಿ ಸಭೆಯನ್ನು ಕಂದಾಯ ಕಛೇರಿಯಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿ ರವರು ವಾರ್ಡ್‌ನ ಸಾರ್ವಜನಿಕರ ಕುಂದು ಕೊರತೆಗಳು ಸಮಿತಿ ಸಭೆಯ ಸದಸ್ಯರವರೊಂದಿಗೆ ಹಾಗೂ ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

➢ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಟೈಲರಿಂಗ್ ತರಬೇತಿ ನೀಡಲು ಸೂಕ್ತವಾದ ಸ್ಥಳ ಗುರುತಿಸಿಕೊಡಲು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮಹಮದ್ ಅಲಿ ರಸ್ತೆ ಬದಿಯ ಮೋರಿಯನ್ನು ಸ್ವಚ್ಛಗೋಳಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳಿಗೆ ಪರಿಹರಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು**

➢ **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಶಾಂಪುರ ಮುಖ್ಯ ರಸ್ತೆಯಿಂದ ಚರ್ಮದ ಮಂಡಿಗೆ ಪೂರೈಸುವ ನೀರಿನ ಲೈನ್ ಕಲುಶಿತಗೊಂಡಿದ್ದು ಕೂಡಲೆ ಪರಿಹರಿಸಬೇಕಾಗಿ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಹತ್ತಿರವಿರುವ ಕೊಳವೆ ಬಾವಿಯನ್ನು ರೀಪೇರಿ ಮಾಡಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ನೀರು ಮತ್ತು ಒಳಚರಂಡಿ ಕಾಮಗಾರಿ ನಿರ್ವಹಿಸಲು ರಸ್ತೆ ಕತ್ತರಿಸುತ್ತಿರುವುದು, ಸದರಿ ಕಾಮಗಾರಿಗಳ ನಿರ್ವಹಣೆ ಸಮಯದಲ್ಲಿ ವಾರ್ಡ್ ಇಂಜಿನಿಯರ್‌ರವರಿಗೆ ಸೂಚನೆ/ ಮಾಹಿತಿ ನೀಡದೆ ಇರುವುದು

ಕಂಡುಬಂದಿರುತ್ತದೆ. ಕಾಮಗಾರಿ ಸಮಯದಲ್ಲಿ ಮಾಹಿತಿ ನೀಡಲು ಹಾಗೂ ರಸ್ತೆಯನ್ನು ಯತಾಸ್ಥಿತಿಗೆ ತಂದು ಸಂಪರ್ಕ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳನ್ನು ಕೂಡಲೆ ಪರಿಹರಿಸುವಂತೆ ಕಿರಿಯ ಅಭಿಯಂತರರಿಗೆ ಸೂಚಿಸಲಾಯಿತು.**

➢ **ಸ್ಟ್ರೀಟ್ ಲೈಟ್ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿನ ಸ್ಟ್ರೀಟ್‌ಲೈಟ್‌ಗಳು ಕೆಟ್ಟು ಹೋಗಿದ್ದು ರಿಪೇರಿ ಮಾಡಲು ಸೂಚಿಸಿದರು.

**ಕ್ರಮ : ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್ ಮೆಯೋಹಾಲ್) ರವರಿಗೆ ಸೂಕ್ತ ಕ್ರಮವಹಿಸಲು ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ಬೆಸ್ಕಾಂ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್ ಮತ್ತು ಹೋಸದಾಗಿ ಲೈನ್ ನೀಡಲು ರಸ್ತೆ ಕತ್ತರಿಸುತ್ತಿರುವುದು, ಸದರಿ ಕಾಮಗಾರಿಗಳ ನಿರ್ವಹಣೆ ಸಮಯದಲ್ಲಿ ವಾರ್ಡ್ ಇಂಜಿನಿಯರ್‌ರವರಿಗೆ ಸೂಚನೆ/ ಮಾಹಿತಿ ನೀಡದೆ ಇರುವುದು ಕಂಡುಬಂದಿರುತ್ತದೆ. ಕಾಮಗಾರಿ ಸಮಯದಲ್ಲಿ ಮಾಹಿತಿ ನೀಡಲು ಹಾಗೂ ರಸ್ತೆಯನ್ನು ಯತಾಸ್ಥಿತಿಗೆ ತಂದು ಸಂಪರ್ಕ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಅಮರ್ ಲೇಔಟ್‌ನಲ್ಲಿ ವಿದ್ಯುತ್ ಏರುಪೇರು ಆಗುತ್ತಿರುವುದು ಕಂಡುಬಂದಿದ್ದು ಕೂಡಲೆ ಸರಿಪಡಿಸಲು ಸೂಚಿಸಿದರು.

**ಕ್ರಮ : ಸಹಾಯಕ ಅಭಿಯಂತರರು (ಬೆಸ್ಕಾಂ) ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್–48**

**ಪ್ರತಿಗಳನ್ನು:**

- **ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.**
- **ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.**
- **ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ**
- **ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.**
- **ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.**
- **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.**

- ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಮಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ಟ್ರೀಟ್ ಲೈಟ್) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಛೇರಿ ಪ್ರತಿ.